ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ
(Kristu Jayanti Kannada Sanshodhana Patrike)
ಸಂಪುಟ 1, ಸಂಚಿಕೆ 1, ಮಾರ್ಚ್ 2022, ಪುಟಗಳು 01 – 16

# ಸಂಶೋಧನೆ – ಓದಿನ ಮೀಮಾಂಸೆ

**ಡಾ. ಎಸ್. ನಟರಾಜ ಬೂದಾಳು**
*ನಿವೃತ್ತ ಪ್ರಾಧ್ಯಾಪಕರು ಮತ್ತು ಸಾಹಿತಿಗಳು*
*ತುಮಕೂರು*
Email: snatarajabudalu@gmail.com

ಸಂಶೋಧನೆಗೆ ವಿಷಯದ ಆಯ್ಕೆಗೆ ನಾವೆಲ್ಲ ತುಂಬಾ ಎಚ್ಚರದಿಂದಿರುತ್ತೇವೆ. ಆದರೆ ಯಾವ ಓದನ್ನು ಬಳಸಿ ಈ ಸಂಶೋಧನೆಯನ್ನು ನಡೆಸುತ್ತೇನೆ ಎಂಬುದರ ಬಗೆಗೆ ನಮಗೆ ಸ್ಪಷ್ಟತೆ ಇರುತ್ತದೆಯೆ? ಏನನ್ನು ನೋಡುತ್ತೇವೆ ಎನ್ನುವುದಷ್ಟೆ ಮುಖ್ಯವೆಂದುಕೊಳ್ಳುತ್ತೇವೆ. ಯಾವ, ಯಾರ ಕಣ್ಣಿನ ಮೂಲಕ ನೋಡುತ್ತೇವೆ ಎನ್ನುವುದನ್ನು ಅಷ್ಟಾಗಿ ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಕಾರಣವನ್ನಷ್ಟೆ ಗಮನಿಸಿ, ಪರಿಣಾಮ ನಿರೀಕ್ಷಿಸುತ್ತೇವೆ. ಸನ್ನಿವೇಶವನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಒಂದು ಫಲ ಅಥವಾ ಪರಿಣಾಮಕ್ಕೆ ಕಾರಣ ಎಷ್ಟು ಮುಖ್ಯವೋ ಸನ್ನಿವೇಶವೂ ಅಷ್ಟೇ ಮುಖ್ಯ. ನಾವು ಆಯ್ಕೆ ಮಾಡಿಕೊಳ್ಳುವ ವಸ್ತುವಿನಿನಷ್ಟೆ ಮುಖ್ಯವಾದುದು ನಾವು ಒದಗಿಸಿಕೊಳ್ಳುವ ಓದು. ಅದು ಲೋಕವನ್ನು ನೋಡುವ ಕಣ್ಣು, ನಮ್ಮ ಸಂಶೋಧನಾ ವಿಷಯವನ್ನು ಕಟ್ಟಲು ಬಳಸುವ ಕಣ್ಣು. ಬಹು ದೀರ್ಘಕಾಲದಿಂದ ಅಕ್ಷರ, ಪಠ್ಯ ಮತ್ತು ಓದುಗಳು ನಿಯಂತ್ರಣಕ್ಕೆ ಒಳಗಾಗಿವೆ. ಇವೆಲ್ಲ ಸಾಂಸ್ಕೃತಿಕ ವಸಾಹತುವಿನ ನಿಯಂತ್ರಣದ ಭಾಗವೇ ಆಗಿವೆ. ಈಗ ಅಕ್ಷರ ಮುಕ್ತವಾಗಿವೆ. ಪಠ್ಯ ಮತ್ತು ಓದುಗಳಿನ್ನೂ ನಿಯಂತ್ರಣದಲ್ಲಿಯೇ ಇವೆ. ಹಾಗಾಗಿ ಈ ಓದಿನ ಮೀಮಾಂಸೆಯನ್ನು ನಾವೀಗ ಗಂಭೀರವಾಗಿ ಇದಿರಾಗಬೇಕಿದೆ.

ನಮ್ಮ ಓದನ್ನು ನಿಯಂತ್ರಿಸುವ ಅನೇಕ ನಿಯಂತ್ರಕಗಳಿವೆ. ಅವುಗಳ ಒಂದು ಪಟ್ಟಿ ಮಾಡಿ ನೋಡಬಹುದು:

೧. ಸಾಮಾನ್ಯವಾಗಿ ನಮ್ಮ ಸಾಹಿತ್ಯ ಪರಂಪರೆಯನ್ನು ಗ್ರಾಂಥಿಕ ಮೌಖಿಕ ಎಂಬ ಎರಡೇ ವರ್ಗೀಕರಣಗಳ ಮೂಲಕ ಓದುವ ಒಂದು ಕ್ರಮವಿದೆ. ಈ ವರ್ಗೀಕರಣ ಕೇವಲ ಸಂಪಾದನೆ, ಗುರುತಿಸುವಿಕೆಗಳಿಗಷ್ಟೇ ಸೀಮಿತವಾಗದೆ ಶ್ರೇಣೀಕರಣಕ್ಕೂ ಬಳಕೆಯಾಗಿದೆ. ಗ್ರಾಂಥಿಕವಾದುದು ಶ್ರೇಷ್ಠ ಮೌಖಿಕ ಕನಿಷ್ಟ ಎಂಬ ನಿಲುವು ನಮ್ಮ ಓದುಗಳಲ್ಲಿ ಸ್ಥಾಪಿತವಾಗಿದೆ. ಹಾಗೆ ನೋಡಿದರೆ ನಿರಂತರ ಚಲನಶೀಲವಾದ ಸತ್ಯದ ಜೊತೆಗೆ ಮೌಖಿಕಕ್ಕೆ ಸಾಧ್ಯವಾಗುವ ಚಲನಶೀಲತೆ ಗ್ರಾಂಥಿಕಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಇಂತಹ ಓದುಗಳು ಚಾಲ್ತಿಯಲ್ಲಿವೆ.

೨. ಇನ್ನು ನಮ್ಮ ಓದಿಗೆ ಮತ್ತೊಂದು ವರ್ಗೀಕರಣ ಸಾಧ್ಯ. ಆದರೆ ಅದನ್ನು ಪ್ರಯತ್ನಿಸಿಲ್ಲ. ನಮ್ಮ ಸಾಹಿತ್ಯದಲ್ಲಿ ದೊಡ್ಡ ಪ್ರಮಾಣದಲ್ಲಿರುವುದು ಸಾಧಕ ಸಾಹಿತ್ಯ. ಇದು ಮೌಖಿಕವಾಗಿಯೂ ಇರಬಹುದು ಗ್ರಾಂಥಿಕವಾಗಿಯೂ ಇರಬಹುದು.

ಇದನ್ನು ಈವರೆಗೆ ಪರಿಗಣನೆಗೇ ತೆಗೆದುಕೊಂಡಿಲ್ಲ. ವಚನಗಳು, ತತ್ವಪದಗಳು ಮತ್ತು ವಿವಿಧ ದೇಸೀ ಅನುಭಾವೀ ಸಾಹಿತ್ಯ ಸಾಧಕ ಸಾಹಿತ್ಯವೇ ಹೊರತು ಓದಿನ ಉದ್ದೇಶದ ಸಾಹಿತ್ಯವಲ್ಲ. ಅವು ಕೇವಲ ವಾಗ್ರಚನೆಗಳಲ್ಲ. ಸಾಹಿತ್ಯವೆಂದರೆ ಓದಲು ಓದಿ ಹೇಳಲು ಎಂಬ ಗ್ರಹಿಕೆಯಾಚೆಗೆ ಇರುವ ಸಾಹಿತ್ಯವನ್ನು ನಾವು ಓದುತ್ತಿರುವ ಕ್ರಮವನ್ನು ಪುನರ್ರಚಿಸಿಕೊಳ್ಳಬೇಕಿದೆ.

೩. ಮಧ್ಯಯುಗೀನ ಭಾರತವನ್ನು 'ಓದುವ' ರಾಷ್ಟ್ರೀಯವಾದಿ ಓದಿನ ರಾಜಕಾರಣವನ್ನು ನಾವು ಈಗ ಗಂಭೀರವಾಗಿ ಇದಿರಾಗಬೇಕಿದೆ. ನಮ್ಮ ಓದಿಗೆ ಗಂಭೀರವಾದ ಮಿತಿಗಳು ಒದಗುವುದು ರಾಷ್ಟ್ರೀಯವಾದಿ ಓದುಗಳಿಂದ ಎನ್ನುವುದು ಈಗಾಗಲೇ ಸಾಬೀತಾಗಿರುವ ಸಂಗತಿ.  ಈ ರೀತಿಯ ಓದುಗಳು ಈ ಹೊತ್ತಿನವಷ್ಟೇ ಅಲ್ಲ. ಕನ್ನಡ ಸಾಹಿತ್ಯವೆಷ್ಟು ಪ್ರಾಚೀನವೋ ಈ ಓದಿನ ಮೀಮಾಂಸೆಯೂ ಅಷ್ಟೇ ಪ್ರಾಚೀನವಾದುದು. ಹಾಗೆ ನೋಡಿದರೆ ಕನ್ನಡದ ಮೊದಲ ಲಕ್ಷಣಕಾವ್ಯವೆಂದು ನಾವು ಕರೆದುಕೊಳ್ಳುತ್ತಿರುವ ಕವಿರಾಜಮಾರ್ಗವೂ ಓದುಗಳ ಬಗೆಗೆ ಚರ್ಚೆಯನ್ನೆತ್ತುತ್ತದೆ. ಕೆ. ವಿ ನಾರಾಯಣ ಅವರು ಇದನ್ನು ಸ್ಪಷ್ಟವಾಗಿ ಗುರುತಿಸುತ್ತಾರೆ. ಸಾಮ್ರಾಜ್ಯನಿರ್ಮಾಣ ಸಂದರ್ಭದ ರಚನೆಯಾಗಿರುವುದರಿಂದ ಅದು ರಾಷ್ಟ್ರೀಯವಾದಿ ಓದೊಂದನ್ನು ಪ್ರಿಸ್ಕ್ರೈಬ್ ಮಾಡುತ್ತದೆ. ಹಲವು ಕನ್ನಡಂಗಳ ಒಳಗೇ ಒಂದು ಪ್ರಮಾಣ ಕನ್ನಡವನ್ನು, ಪ್ರಮಾಣ ಓದನ್ನು ಮುಂದಿಡುವ ಪ್ರಯತ್ನವನ್ನು ಮಾಡುತ್ತದೆ. ಎಲ್ಲೆಲ್ಲಿ ರಾಷ್ಟ್ರೀಯವಾದಿ ದೃಷ್ಟಿಕೋನಗಳು ಸಾಹಿತ್ಯಕ್ಕೆ ಒದಗಿಬರುತ್ತವೆಯೋ ಆಗೆಲ್ಲ ಬಹುತ್ವಕ್ಕೆ ಧಕ್ಕೆ ಬಂದಿದೆ ಎನ್ನುವುದು ತಕ್ಷಣ ಗೋಚರವಾಗುವ ಸಂಗತಿ.

೪. ಎಲ್ಲವನ್ನೂ ಸರಳ ದ್ವೈತಾದ್ವೈತಗಳಿಗೆ ಸಮೀಕರಿಸುವ, ಶೈವ–ವೈಷ್ಣವಗಳೊಂದಿಗೆ ಗುರುತಿಸಿಕೊಳ್ಳದ ಯಾವುದನ್ನೂ ಉಳಿಯಗೊಡದ ರಾಷ್ಟ್ರೀಯವಾದಿ ಓದಿನ ಒತ್ತು ಸೇರ್ಪಡೆಗಿಂತ ಬೇರ್ಪಡೆಯ ಕಡೆಗೆ ಇತ್ತು. ಬೇರ್ಪಡಿಸಿ ಹೊರಗೆ ನಿಲ್ಲಿಸುವುದು, ಅಂತಹವನ್ನು ಓದಿಗೆ ಒಳಪಡಿಸದೆ ಇರುವುದು, ಕೆಳಸ್ತರವೊಂದಕ್ಕೆ ಸೀಮಿತಗೊಳಿಸಿ ಓದುವುದು ಮುಂತಾದುವುಗಳು ಈ ಮಾದರಿಯ ಓದುಗಳ ಪರಿಣಾಮ. ರಾಷ್ಟ್ರೀಯವಾದಿ ನಿಲುವಿಗೆ ಬಹುತ್ವ ಒಂದು ಅಡ್ಡಿ. ಹಾಗಾಗಿ ಎಲ್ಲವನ್ನೂ ಏಕತ್ರಗೊಳಿಸಿ ಅಥವಾ ತುಂಬಾ ಸೀಮಿತ ಸಂಖ್ಯೆಗೆ ಇಳಿಸಿಕೊಂಡು ನಡೆಸುವ ಇಂತಹ ಓದುಗಳನ್ನು ಸಂಶೋಧನೆ ಇದಿರಾಗುವಾಗ ತಾಳಬಹುದಾದ ನಿಲುವುಗಳನ್ನು ಕುರಿತು ನಾವು ಚರ್ಚಿಸಬಹುದು.

೫. ಯಾವುದನ್ನು ಕನ್ನಡದ ಸಾಹಿತ್ಯ ಚರಿತ್ರೆ ಎಂದು ಚರಿತ್ರೆಕಾರರು ನಮ್ಮಿಂದ ಓದಿಸುತ್ತಾ ಬಂದಿದ್ದಾರೋ ಅದು ಪ್ರಧಾನವಾಗಿ ಜೈನ, ವೀರಶೈವ ಮತ್ತು ವೈದಿಕ ಧರ್ಮಗಳ ಆವರಣಗಳಲ್ಲಿ ಸೃಷ್ಟಿಯಾದುದು. ಹೀಗೆ ಜೈನ, ವೈದಿಕಗಳ ಜೊತೆಯಲ್ಲಿ ವೀರಶೈವವನ್ನು ಇಡಲು ತಕರಾರುಗಳಿರಬಹುದು.  ಅವೇನಿದ್ದರೂ ತಾತ್ವಿಕ ತಕರಾರುಗಳೇ ಹೊರತು ಸಾಂಸ್ಕೃತಿಕ ರಾಜಕಾರಣದ ನೆಲೆಯಿಂದ ಕನ್ನಡದ ಈ ಹೊತ್ತಿನ ಸಂದರ್ಭವನ್ನು ಗಮನಿಸಿದರೆ ಅಂತಹ ವ್ಯತ್ಯಾಸಗಳೇನೂ ಇಲ್ಲ. ಇವುಗಳಾಚೆಗಿನ ಬಹುಜನರ ಸಾಹಿತ್ಯವನ್ನು ಓದಿನಿಂದ ದೂರವಿಟ್ಟ ಚರಿತ್ರೆಯನ್ನು ನಾವು

ಎಲ್ಲರ ಚರಿತ್ರೆ ಎಂದು ತಪ್ಪಾಗಿ ಗ್ರಹಿಸಿ ಓದುತ್ತಿದ್ದೇವೆ. ನಮ್ಮ ಕನ್ನಡ ಸಾಹಿತ್ಯದ ಓದು ಶುರುವಾಗುವುದು ಜೈನರಿಂದ ರಚಿತವಾದ ಸಾಹಿತ್ಯದಿಂದ. ಅದಕ್ಕಿಂತ ಮೊದಲಿದ್ದ ಬೌದ್ಧ ಸಾಹಿತ್ಯವನ್ನು ನಮ್ಮಿಂದ ದೂರಮಾಡಲಾಗಿದೆ. ನಮ್ಮ ಓದಿಗೆ ಸಿಗದಂತೆ ಮಾಡಿ ವಂಚಿಸಲಾಗಿದೆ. ಹತ್ತನೆಯ ಶತಮಾನದ ಹಿಂದೆ ಇದ್ದ ಸಾಹಿತ್ಯ ಬೌದ್ಧ ಆವರಣದ್ದು ಎಂಬುದು ಈಗಾಗಲೇ ವಿದ್ವಾಂಸರಿಂದ ಖಚಿತಪಡಿಸಲಾಗಿರುವ ಸಂಗತಿಯಾಗಿದೆ. ಹಾಗಾಗಿ ನಮ್ಮ ಓದಿನಿಂದ ದೂರಮಾಡಲ್ಪಟ್ಟ ಬೌದ್ಧ ಆವರಣದ ಸಾಹಿತ್ಯವನ್ನು ನಾವು ಓದಿಗೆ ಒದಗಿಸಿಕೊಳ್ಳಬೇಕಿದೆ.

೬. ಇನ್ನು ವಚನಗಳ ಓದಿನ ಸ್ವರೂಪವನ್ನು ಗಮನಿಸಿದರೆ. ವಚನಗಳ ಒಂದು ಓದಿನ ಮಾದರಿ ನಮ್ಮ ನಡುವೆ ಇದೆ. ಅದು ಶೂನ್ಯ ಸಂಪಾದನಾಕಾರರಿಂದ ಆರಂಭಗೊಂಡು, ಸಿಂಗಳದ ಸಿದ್ಧಬಸವರಾಜ ದೇವರಿಂದ ಹಿಡಿದು ಎಲ್. ಬಸವರಾಜುವರೆಗೆ ವಚನಗಳ ಓದಿನ ಮಾದರಿಯೊಂದು ನಮ್ಮ ನಡುವೆ ಇದೆ.  ಇದೂ ಒಂದು ಓದು. ಆದರೆ ಇದೊಂದೇ ಓದಲ್ಲ. ಒಮ್ಮೆ ಈ ಓದನ್ನು ಪಲ್ಲಟಿಸಿ ನೋಡಬಹುದು. ಓದನ್ನು ಯಾಕೆ ಪಲ್ಲಟಿಸಬೇಕು? ವಚನ ತಾತ್ವಿಕತೆಯ ಜೀವಾಳವೆಂದರೆ ಬಹುತ್ವ. ಇದು ಅನೇಕ ಧಾರೆಗಳ ಸಂಗಮ. ಇಲ್ಲಿ ಮಾದಾರ ಧೂಳಯ್ಯನೂ ಇದ್ದಾನೆ, ಸೂಳೆ ಸಂಕವ್ವೆಯೂ ಇದ್ದಾಳೆ, ವಕ್ಕಲಿಗರ ಮುದ್ದಣ್ಣನೂ ಇದ್ದಾನೆ, ಹೆಂಡದ ಮಾರಿತಂದೆಯೂ ಇದ್ದಾನೆ. ಹಗ್ಗ ನುಲಿಯೋ ಕೊರಚರ ಚಂದಯ್ಯನೂ ಇದ್ದಾನೆ. ಇದನ್ನು ಒಂದು ಆವರಣ ಎಂದು ಓದುವುದರ ಮೂಲಕ ಅನೇಕರನ್ನು ಹೊರಗೆ ನಿಲ್ಲಿಸಿಬಿಡುತ್ತೇವೆ. ನಿಜ ಕನ್ನಡದಲ್ಲಿ ಬಿಕ್ಕಟ್ಟುಗಳು ಉಂಟಾದಾಗಲೆಲ್ಲ ಕಲ್ಯಾಣದ ಬಾಗಿಲಿಗೆ ಹೋಗಿ ನಿಲ್ಲುವುದು ಒಂದು ಆಕರ್ಶಕ ರೂಪಕ. ಆದರೆ ಹಾಗೆ ಹೋದವರನ್ನೆಲ್ಲ ಒಳಗೆ ಬಿಟ್ಟುಕೊಂಡಿದ್ದಾರೆಯೇ? ಕಲ್ಯಾಣದ ಬಾಗಿಲು ಅಲ್ಲಮನ ತಕರಾರುಗಳನ್ನೇ ಬಗೆಹರಿಸಲು ಆಗಿಲ್ಲ. ಇನ್ನು ಅಕ್ಕ, ಮಾದಾರ ಧೂಳಯ್ಯನಂತವರನ್ನು ಹೇಗೆ ಇದಿರಾಗುತ್ತಿತ್ತೋ ಗೊತ್ತಿಲ್ಲ.

೭. ಒಬ್ಬ ವಚನಕಾರನನ್ನು ಕೇಂದ್ರದಲ್ಲಿಟ್ಟು ಓದುವುದರಿಂದಲೂ ಇಂತಹದೇ ಹೊರಹಾಕುವಿಕೆ ಸಂಭವಿಸುತ್ತದೆ. ಇದೊಂದು ನಿರ್ಣಾಯಕ ಸಂಗತಿ. ಹೊರಗೆ ನಿಲ್ಲಿಸದೆ ಎಲ್ಲರನ್ನೂ ಒಳಗೆ ಕರೆದ ವಚನಕಾರರನ್ನು ಓದುವ ಅನೇಕ ಬಗೆಗಳನ್ನು ನಾವಿನ್ನೂ ಕಂಡುಕೊಳ್ಳಬೇಕಿದೆ. ಉದಾಹರಣೆಗೆ, ವಚನಗಳ ಓದಿಗೆ ಬರಿಗೈಲಿ ಹೊರಡಲಾಗದು, ಲಿಂಗಾಯತ/ವೀರಶೈವ ಆವರಣಗಳೂ ಪೂರ್ತಿ ನ್ಯಾಯ ಒದಗಿಸಲಾರವು. ವಚನಗಳ ಅನುಸಂಧಾನಕ್ಕೆ ಸಾಧಕ ಸಂಹಿತೆಯ ನೆರವಿರಬೇಕು ಇಲ್ಲವೇ ಅನೇಕ ತತ್ವಸಂಹಿತೆಗಳ ಆಸರೆಯಾದರೂ ಇರಬೇಕು ಅಥವಾ ಎಲ್ಲವನ್ನೂ ದಾಟಿ ಬರಿಗೈ ಮಾಡಿಕೊಂಡು ಕೂಡ ಹೋಗಬಹುದು.  ನಮ್ಮ ನಡುವಿನ ವಚನಗಳ ಓದು ಒಂದೇ ಮಾದರಿಯ ಜಾಡಿಗೆ ಬಿದ್ದು ಕೊರಕಲಾಗಿದೆ. ಅದು ಬೇರೆ ಓದುಗಳ ಸಾಧ್ಯತೆಗಳನ್ನು ಮುಚ್ಚಿಹಾಕಿದೆ. ಅವುಗಳ ಸುತ್ತ ಇರುವ ಪಾಂಥಿಕ ಶತತ್ವದ ಬೇಲಿ ಕೂಡ ಬಲವಾಗಿಯೇ ಇದೆ. ವಚನಗಳು ಒಡನಾಡಿದ ಅನೇಕ ದೇಸಿ ಚಿಂತನಾಕ್ರಮಗಳ ನೆರವಿನಿಂದ ಬೇರೊಂದು ಓದನ್ನು ನಡೆಸಬಹುದು ಎಂಬುದು ನನ್ನ ನಂಬುಗೆ.

ಈ ದೃಷ್ಟಿಯಿಂದ ವಚನಗಳ ಓದಿಗೆ ಒದಗಿಸಿಕೊಳ್ಳಬಹುದಾದ ಪರಿಕಲ್ಪನೆಗಳೆಂದು ಕೆಲವನ್ನು ಗುರುತಿಸಿಕೊಳ್ಳಬಹುದು. ದೈವಮಾರ್ಗವನ್ನು ನಿರಾಕರಿಸಿದ ಗುರುಮಾರ್ಗ, ದ್ವೈತಾದ್ವೈತಗಳನ್ನು ನಿರಾಕರಿಸಿದ ಬಯಲು ಅಥವಾ ಶೂನ್ಯತೆ, ವೇದ ಶಾಸ್ತ್ರ ಪುರಾಣಗಳನ್ನು ನಿರಾಕರಿಸಿದ ಪ್ರಮಾಣ ನಿರಾಕರಣೆ, ವರ್ಣಾಶ್ರಮ, ಜಾತಿ ವ್ಯವಸ್ಥೆಗಳನ್ನು ವಿಧಿಸುವ ಮನುಸ್ಮೃತಿ ಮುಂತಾದ ವೈದಿಕ ಹಿಂದೂ ಧರ್ಮವನ್ನು ನಿರಾಕರಿಸಿದ ಶರಣ ಧರ್ಮ, ಮುಟ್ಟು ಮೈಲಿಗೆ ಶುದ್ಧಾಶುದ್ಧಗಳನ್ನು ನಿರಾಕರಿಸಿದ ನಿಸರ್ಗ ಸಾಮರಸ್ಯ, ದೈವ–ಭಕ್ತನೆಂಬ ತರತಮವನ್ನು ನಿರಾಕರಿಸಿದ ಲಿಂಗಾಂಗ ಸಾಮರಸ್ಯ, ನಿತ್ಯನಾರಕೀ ತತ್ವವನ್ನು ನಿರಾಕರಿಸಿದ ಸರ್ವಮುಕ್ತಿ ಸಾಧ್ಯತೆ, ಹರಿಸರ್ವೋತ್ತಮ ತತ್ವವನ್ನು ನಿರಾಕರಿಸಿದ ಸರ್ವ ಮಂಗಲ (ಶಿವ) ತತ್ವ, ಪಂಚಾಂಗವನ್ನು ನಿರಾಕರಿಸಿದ ಕಾಲದೇಶ ನಿರಾಕರಣೆ, ವ್ಯಕ್ತಿರೂಪದ ಗುರುವನ್ನು ನಿರಾಕರಿಸಿದ ಅರಿವೇ ಗುರು, ಅಕ್ಷರ ಮಾತ್ರ ಜ್ಞಾನವೆಂಬುದನ್ನು ನಿರಾಕರಿಸಿದ ಶ್ರಮ ಕಸುಬು ಕೌಶಲಗಳು ಜ್ಞಾನದ ಮಾಧ್ಯಮಗಳೆಂಬ ನಿಲುವು, ತಾನು–ಇದಿರಿನ ನಿರಸನ, ಮನೋನಿರಸನ–ಅಮನಸ್ಕ–ಮನೋಲಯ ಅಥವಾ ಭಾವದಗ್ಧ ಸ್ಥಿತಿ, ಕುರುಹಿನ ನಿರಾಕರಣೆ, ಕುರುಹನ್ನು ಹಿಡಿದು ಕುರುಹ ದಾಟುವುದು, ಪ್ರಕ್ರಿಯಾ ಮೀಮಾಂಸೆ, ಮುಂತಾದ ಪರಿಕಲ್ಪನೆಗಳು ವಚನದ ಓದಿಗೆ ಒದಗಿಬರುತ್ತವೆ. ಬೌದ್ಧ, ಜೈನ, ನಾಥ, ಸಿದ್ಧ, ಆಜೀವಿಕ, ಸಹಜಯಾನ ಮುಂತಾದ ದೇಸಿ ಶ್ರಮಣಧಾರೆಗಳು ಮುಂದಿಟ್ಟ ಈ ಪರಿಕಲ್ಪನೆಗಳ ಅನುಸಂಧಾನದಲ್ಲಿ ವಚನಕಾರರು ಕಟ್ಟಿ ಬದುಕಿನ ವಚನಗಳನ್ನು ಅವುಗಳ ನೆರವಿಲ್ಲದೆ ನಡೆಸುವ ಓದನ್ನು ಸರಿಯೆಂದು ಭಾವಿಸಲಾಗದು. ಈಗ ವಚನಗಳನ್ನು ಓದಲು ಬಳಸುತ್ತಿರುವ ವೀರಶೈವ/ಲಿಂಗಾಯತವೂ ಒಂದು ಓದಿನ ಮಾದರಿಯಾಗಿದೆ. ಅದನ್ನು ಕೂಡ ನಮ್ಮ ಇಂದಿನ ಓದಿಗೆ ಬಳಸಿಕೊಳ್ಳಬಹುದು. ಆದರೆ ಅದೊಂದೇ ಓದಿನ ಮಾದರಿಯೆಂಬ ಗ್ರಹಿಕೆಯನ್ನು ದಾಟುವುದು ಅನಿವಾರ್ಯ. ಇಡಿಯಾಗಿ ವಚನಸಾಹಿತ್ಯವನ್ನು ಷಟ್‌ಸ್ಥಲವೋ, ಗುರುಲಿಂಗಜಂಗಮ ತ್ರೈವಿಧ್ಯವೋ, ಕುರುಹನ್ನು ಹಿಡಿದು ಕುರುಹ ದಾಟುವ ಲಿಂಗಾಯತವೋ – ಇಂತಹ ಒಂದು ಓದಿಗೆ ಸೀಮಿತಗೊಳಿಸಲಾಗದು.

ವಚನಗಳೆಂದು ಕರೆಯುವ ಒಂದು ತಾತ್ವಿಕ ಆವರಣವನ್ನು ಓದಿದ/ಓದುತ್ತಿರುವ ಪರಿಗಳನ್ನು ಗಮನಿಸಬಹುದು. ವಚನವನ್ನು ಚಳವಳಿ ಎಂದು ಕೆಲವರು ಕರೆದರೆ, ಕೆಲವರು ಬೇರೆಯದೇ ಧರ್ಮ ಎನ್ನುತ್ತಾರೆ. ಇನ್ನು ಕೆಲವರು ಎಲ್ಲ ಜಾತಿಗಳ ಬಿಡುಗಡೆಯ ಮಾರ್ಗ ಎಂದು ಒಂದು ಕಾಲಕ್ಕೆ ನಂಬಿದ್ದರು, ಇನ್ನು ಕೆಲವರು ಇದು ಶ್ರೇಷ್ಠ ಜಾತಿ ಎಂದು ನಂಬಿದ್ದಾರೆ (ಅಂತಹವರಿಗೆ ಅವರನ್ನು ಶ್ರೇಷ್ಠವಾಗಿಸಲು ಕನಿಷ್ಠ ಜಾತಿಗಳು ಬೇಕೇಬೇಕು), ಇನ್ನು ಕೆಲವರಿಗೆ ವಚನಗಳು ನಮ್ಮ ನಡುವಿನ ತಾರತಮ್ಯಗಳನ್ನು ಪ್ರತಿರೋಧಿಸಲು ಒದಗಿ ಬರುವ ಉದಾಹರಣೆಗಳಾಗಿವೆ, ಮತ್ತೂ ಕೆಲವರಿಗೆ ಇದು ಏಕಾಕಿಯಾಗಿ ಒಂದೇ ಸಾರಿ ಅವತರಿಸಿದ ಧರ್ಮವಾಗಿದ್ದು ಎಲ್ಲಿಂದಲೋ ಬಂದು ಅವತರಿಸಿದ್ದೆಂದು ಅವರು ನಂಬುತ್ತಾರೆ. ಇದೊಂದು ನಿರ್ಣಾಯಕ ಸಂಗತಿ. ಹೊರಗೆ ನಿಲ್ಲಿಸದೆ ಎಲ್ಲರನ್ನೂ ಒಳಗೆ ಕರೆದ ವಚನಕಾರರನ್ನು ಓದುವ ಅನೇಕ ಬಗೆಗಳನ್ನು ನಾವಿನ್ನೂ ಕಂಡುಕೊಳ್ಳಬೇಕಿದೆ. ಅಂತಹ ಒಂದು ಓದಿನ ಪಲ್ಲಟಕ್ಕೆ ವಚನಗಳು ಕಾಯುತ್ತಿವೆ.

೭. ಕನ್ನಡ ಸಾಹಿತ್ಯದ ಮೇಲೆ ಧರ್ಮ, ಅಧಿಕಾರ ಕೇಂದ್ರಗಳು ಮತ್ತು ಸಂಸ್ಕೃತ ಭಾಷೆಯ ಪ್ರಭಾವವನ್ನು ಗುರುತಿಸಿ ನಡೆಸುವ ಒಂದು ದೀರ್ಘಕಾಲೀನ ಓದು ಚಾಲ್ತಿಯಲ್ಲಿದೆ. ಆದರೆ ಇಂತಹ ಓದು ಈ ಪ್ರಕ್ರಿಯೆಯಲ್ಲಿ ಹೊರಗಿಟ್ಟ ದರ್ಶನಗಳನ್ನಾಗಲೀ, ಕಾವ್ಯ ಮಾರ್ಗಗಳನ್ನಾಗಲೀ, ಜೀವನಕ್ರಮಗಳನ್ನಾಗಲೀ ಕುರಿತು ಮಾತನಾಡುವುದಿಲ್ಲ. ಧರ್ಮ, ಅಧಿಕಾರಕೇಂದ್ರಗಳು ಮತ್ತು ಸಂಸ್ಕೃತ ಭಾಷೆ ಇವುಗಳ ನಡುವಿನ ನೆಕ್ಸಸ್ ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ಹಾಗಾಗಿ ಇಂತಹ ಓದುಗಳಿಂದ ರೂಪಿತವಾಗಿರುವ ಶೈಕ್ಷಣಿಕ ಸಂಸ್ಥೆಗಳು ನಡೆಸುವ ಓದುಗಳನ್ನು ಸಮೂಹ ಮಾನ್ಯ ಮಾಡುತ್ತದೆ ಎಂದೇನೂ ಇಲ್ಲ. ಹಾಗಾಗಿ ಸಮೂಹ ನಡೆಸುವ ಓದುಗಳಿಗೂ, ಶೈಕ್ಷಣಿಕ ಓದುಗಳಿಗೂ ನಿರಂತರ ಕಂದರ ಉಳಿದೇ ಇರುತ್ತದೆ. ಮುಖ್ಯಾಮುಖ್ಯ ವರ್ಗೀಕರಣದ ಉದ್ಯೋಗವನ್ನು ನಡೆಸುವ ಶೈಕ್ಷಣಿಕ ಓದುಗಳಿಗೆ ಸೇರ್ಪಡೆ ಮತ್ತು ಬೇರ್ಪಡೆಗಳ ಆಯ್ಕೆಗಳು ಅನಿವಾರ್ಯವಾಗಿಬಿಡುತ್ತವೆ. ಬದಲಿಗೆ, 'ಯಾರೂ ಅಮುಖ್ಯರಲ್ಲ' ಎನ್ನುವ ನಿಲುವು ಕನ್ನಡದ ಅಭಿವ್ಯಕ್ತಿಯ ಕ್ರಮಗಳನ್ನು, ಕನ್ನಡದ ಚಹರೆಗಳನ್ನು ಕಂಡುಕೊಳ್ಳುವ ಯಾನಕ್ಕೆ ಮೊದಲ ಹೆಜ್ಜೆಯಂತೆ ನನಗೆ ತೋರುತ್ತದೆ. ನಿಶ್ಚಿತವಾಗಿ ಇಲ್ಲಿ ಅನೇಕ ಕನ್ನಡಗಳಿವೆ. ಈ ಅನೇಕಗಳು ಅನೇಕಗಳಾಗುತ್ತಲೇ ಹೋಗುವ ಈ ಅನೇಕಾಂತವಾದಿ ದೃಷ್ಟಿಕೋನ ಓದಿನ ಮೀಮಾಂಸೆಯ ಒಂದು ಪ್ರಮುಖ ದೃಷ್ಟಿಕೋನವೆಂದೇ ನಾನು ಭಾವಿಸುತ್ತೇನೆ.

೮. ಕುವೆಂಪು ಅನೇಕಾಂತವಾದಿ. ಯಾವುದಾದರೂ ಸಂಗತಿಯನ್ನು ಸರಿಯಾಗಿ ಅರಿತುಕೊಳ್ಳಲು ಜೈನ ಮತ್ತು ಬೌದ್ಧ ಧರ್ಮಗಳು ಕೊಟ್ಟ ಕಣ್ಣು ಅನೇಕಾಂತವಾದ. ಕುವೆಂಪು ಅವರನ್ನು ಓದಲು ಇದು ಸರಿಯಾದ ಕ್ರಮ. ಇದನ್ನು ಒಂದು ಉದಾಹರಣೆ ಮೂಲಕ ವಿವರಿಸಬಹುದು. ಕನ್ನಡದಲ್ಲಿ ಮೊದಲು ಬಂದದ್ದು ವಾಲ್ಮೀಕಿ ರಾಮಾಯಣವೂ ಅಲ್ಲ, ವೈದಿಕ ರಾಮಾಯಣವೂ ಅಲ್ಲ. ಹನ್ನೆರಡನೆಯ ಶತಮಾನದಲ್ಲಿ ನಾಗಚಂದ್ರನೆಂಬ ಜೈನ ಕವಿ, ಜೈನ ರಾಮಾಯಣ ಸಂಪ್ರದಾಯದಲ್ಲಿ ಬರೆದ ರಾಮಚಂದ್ರ ಚರಿತ ಪುರಾಣವೇ ಕನ್ನಡದಲ್ಲಿ ಬಂದ ಮೊದಲ ರಾಮಾಯಣ. ಕುವೆಂಪು ಇದನ್ನು ಹೆಚ್ಚಾಗಿ ಸ್ಮರಿಸದೇ ಹೋದರೂ ರಾಮಾಯಣದರ್ಶನಂ ಕೃತಿಯುದ್ದಕ್ಕೂ ಈ ಜೈನರಾಮಾಯಣದ ಪ್ರಭಾವ ಅವರ ಮೇಲೆ ಇರುವುದು ಕಾಣುತ್ತದೆ. ಜೊತೆಗೆ ಕುವೆಂಪು ಅವರು ಹುಟ್ಟಿ ಬೆಳೆದ ನಾಮಧಾರಿ ಆವರಣದಲ್ಲಿ ಜೈನ ಪ್ರಭಾವ ಜಾಸ್ತಿ ಇದೆ. ಜೈನ ತಾತ್ವಿಕತೆಯ ಮುಖ್ಯ ನಿಲುವಾದ ಅನೇಕಾಂತವಾದ ನಮ್ಮ ಮೀಮಾಂಸೆಯ ಒಂದು ಪ್ರಮುಖ ನಿಲುವು. ಕುವೆಂಪು ರಾಮಾಯಣದರ್ಶನಂನಲ್ಲಿ ಸೀತೆಯ ಜೊತೆಗೆ ರಾಮನೂ ಅಗ್ನಿಯನ್ನು ಹಾಯ್ದು ಬರುವಂತೆ ಮಾಡುತ್ತಾರೆ. ಸೀತೆಗೆ ಅನ್ವಯವಾಗುವುದು ರಾಮನಿಗೂ ಆಗಬೇಕು ಎಂಬುದು ಅವರ ನಿಲುವು.

ಕುವೆಂಪು ರಾಮಾಯಣದಲ್ಲಿ ಶ್ರೀರಾಮನ ವನವಾಸದ ಒಂದು ಸಂದರ್ಭದಲ್ಲಿ ಋಷ್ಯಾಶ್ರಮಗಳ ಸಂರಕ್ಷಣೆಯ ನೆಪವನ್ನೊಡ್ಡುತ್ತಾ ಅಲ್ಲಿನ ಮೂಲನಿವಾಸಿಗಳಾದ ರಾಕ್ಷಸರನ್ನು ಅಥವಾ ದಸ್ಯುಗಳನ್ನು ಅಥವಾ ಈ ನೆಲದ

ಮೂಲನಿವಾಸಿಗಳಾದ ನಮ್ಮ ಪೂರ್ವಿಕರನ್ನು ಕೊಲ್ಲುತ್ತ, ಅವರ ನೆಲವನ್ನು ಆಕ್ರಮಿಸಿಕೊಳ್ಳುತ್ತ, ಆರ್ಯರಾದ ಋಷಿಗಳು ಅಲ್ಲಿ ನೆಲೆಸಲು ಅವಕಾಶ ಕಲ್ಪಿಸುವ ಈ ಕ್ರಮವನ್ನು ಸೀತೆ ಪ್ರತಿರೋಧಿಸುತ್ತಾಳೆ:

ಪುಣ್ಯಾಶ್ರಮಗಳಂ ನೆವವೊಡ್ಡುತೈತಂದು
ತಮ್ಮ ನೆಲಮಂ ಸುಲಿಯುತೊಯ್ಯನೆ ವಸತಿಗೈದು
ದಿನ ದಿನಕೆ ತಮ್ಮನೊತ್ತುವರಾರ್ಯರಾದೊಡಂ
ದಸ್ಯುಗಳೆ ದಿಟಮಲ್ತೆ?

ದಕ್ಷಿಣ ಕೀಳು, ದಕ್ಷಿಣ ದಿಕ್ಕು ಕೀಳು, ಅಲ್ಲಿನ ಜನರನ್ನು ದಸ್ಯುಗಳು, ಕಳ್ಳರ್, ರಕ್ಕಸರ್ ಎಂದು ಕರೆದು ಅವಮಾನಿಸುತ್ತಾರೆ. ಇದು ಸಂಸ್ಕೃತಿಯ ನೆಪದಲ್ಲಿ ಮಾಡುತ್ತಿರುವ ನೇರ ರಾಜಕಾರಣ. ಕುವೆಂಪು ಕೆರಳಿ ಈ ಮಾತು ನುಡಿಯುತ್ತಾರೆ:

ನಮ್ಮ ಮಕ್ಕಳ್ ತಾಯಿ ತಂಗೆಯರ
ನೆಮ್ಮದಿಗೆ ಕರುಬಿ ಹೊಂಚುತಿದೆ ಬಡಗದಿಕ್ಕಿನ
ಪಲ್ಲುಗುರ್ ಪುಲಿಯ ಕಣ್. ಲಂಕಾಲತಾಂಗಿಯರ
ದೈತ್ಯವೀರರನೊಲಿದ ನಲ್ಲೆಯರ, ಪಾಲೆದೆಯ
ಧಮಳಿಮಕ್ಕಳಸಿ ಶರಧಿಯ ವಾಮ ವೇಲೆಯಲಿ
ಬೀಡುಬಿಟ್ಟಿದೆ ಭೀಮ ಕಪಿ ಕೇತು ಸಂಕೇತ
ರಾಮಸೇನಾ ರುಷಿತ ರಾಹು....
ನಿನ್ನೆ ಮೊನ್ನೆಯ ವೈರಮಲ್ತು
ತಾಟಕಾದೇವಿಯಂ ಕೊಂದುದೆ ಮೊದಲ್ ನೆವಂ
ಋಷಿ ರಕ್ಷಣಂ, ಗುರಿಯೊ? ನಮ್ಮ ಕುಲನಾಶನಂ!

ಗಮನಿಸಿ ಈ ಉತ್ತರದ ಆರ್ಯ ಮತ್ತು ಕ್ಷತ್ರಿಯ ಸಂಯೋಗವನ್ನು ಕುವೆಂಪು ನಮ್ಮ ಪಾಲಿನ ರಾಹುಕೇತುಗಳು ಎಂದು ಗುರುತಿಸಿದ್ದಾರೆ. ಈ ಹೊತ್ತಿಗೂ ದಕ್ಷಿಣ ತನ್ನ ಚಹರೆಗಳನ್ನು, ಸಂಸ್ಕೃತಿಯನ್ನು ಮತ್ತು ಆ ಮೂಲಕ ರಾಜಕೀಯ ಅಧಿಕಾರವನ್ನು ಕಳೆದುಕೊಳ್ಳುವ ನಿರಂತರ ಆತಂಕದಲ್ಲಿಯೇ ಬಾಳುತ್ತಿದೆ ಎನ್ನುವುದು ಮೇಲ್ನೋಟಕ್ಕೆ ಎಲ್ಲರಿಗೂ ಅರಿವಿಗೆ ಬರುತ್ತದೆ.

೯. ಈ ನೆಲ ಬಹುತ್ವದ ಆಗರ ಹಾಗೆಯೇ ಸಂಸ್ಕೃತಿಯ ದೃಷ್ಟಿಯಿಂದ ಅನೇಕ ಸ್ತರಗಳ ವಸಾಹತು. ಇಲ್ಲಿ ಸಾವಿರಾರು ವರುಷಗಳಿಂದ ನೆಲೆಸಿರುವ ವಸಾಹತುಶಾಹಿಗಳು ಇವೆ ಮತ್ತು ಅಕರಾಳ ವಿಕರಾಳವಾಗಿ ಬೆಳೆಯುತ್ತಲೇ ಇವೆ. ಈ ಸಂದರ್ಭದಲ್ಲಿ ನಿರಂತರವಾಗಿ ವಿಸ್ಮೃತಿಗೆ **ಜಾರುತ್ತಿರುವ ದೇಸಿ ಸಂಸ್ಕೃತಿಯ, ತಾತ್ವಿಕತೆಯ ಪರವಾದ ಓದುಗಳನ್ನು ರೂಪಿಸಿಕೊಳ್ಳುವುದು ಹೇಗೆ? ಒಟ್ಟಾರೆ ದೇಸಿ ಸಂಸ್ಕೃತಿಗಳ ಅನನ್ಯ ತಿಳುವಳಿಕೆಯನ್ನು ಸಂರಕ್ಷಿಸಿಕೊಳ್ಳುವುದು ಹೇಗೆ ಎಂಬುದೇ ಇಂದಿನ ತುರ್ತು. ಇಂತಹ ಓದಿಗೆ ಒದಗಿಸಿಕೊಳ್ಳಬಹುದಾದ ನಿಲುವುಗಳ ಸ್ವರೂಪ ಹೇಗಿರಬಹುದು?** ಸಾಂಸ್ಕೃತಿಕ ವಸಾಹತುಶಾಹಿಯನ್ನು ನಿರಾಕರಿಸುವ ಓದುಗಳು ಒಂದು ಎಚ್ಚರವನ್ನು ಕಾಯ್ದುಕೊಳ್ಳಬೇಕಿದೆ. ಅವೆರಡರ ನಡುವಿನ ವ್ಯತ್ಯಾಸಗಳನ್ನು ಸ್ಪಷ್ಟಪಡಿಸಿಕೊಂಡೇ ಓದನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ಕೆಲವು ಸಾಮಾನ್ಯ ಪ್ರಮುಖ ಲಕ್ಷಣಗಳು:

೧. ಒಂದು ಏಕಾಕಾರಿ ಇನ್ನೊಂದು ಬಹುತ್ವವನ್ನು ಪೋಷಿಸುತ್ತದೆ
೨. ಒಂದು ಏಕಮೂಲ ಇನ್ನೊಂದು ಆದಿ ಅಂತ್ಯಗಳನ್ನು ನಿರಾಕರಿಸಿದ್ದು
೩. ಒಂದು ಹೊರಗಿನ ಮತ್ತೊಂದು ಶಕ್ತಿಯನ್ನು ಆಧರಿಸಿದ್ದು, ಇನ್ನೊಂದು ಪ್ರಕ್ರಿಯಾ ಮೀಮಾಂಸೆಯನ್ನಾಧರಿಸಿದ್ದು
೪. ಒಂದು ಪ್ರಮಾಣಗಳನ್ನಾಧರಿಸಿದ್ದು, ಇನ್ನೊಂದು ಪ್ರಮಾಣ ನಿರಾಕರಣೆಯನ್ನು ಮುಂದಿಡುತ್ತದೆ
೫. ಒಂದು ದೈವ ಮಾರ್ಗ ಇನ್ನೊಂದು ಗುರುಮಾರ್ಗ
೬. ಒಂದು ಆಚರಣಾ ಪ್ರಧಾನ ಇನ್ನೊಂದು ಕಸುಬು, ಶ್ರಮ, ದುಡಿಮೆ, ಕಾಯಕ ಪ್ರಧಾನ
೭. ಒಂದು ಕರ್ಮಸಿದ್ಧಾಂತವನ್ನಾಧರಿಸಿದ್ದು ಇನ್ನೊಂದು ನಿಸರ್ಗನಿಯಮವನ್ನಾಧರಿಸಿದ್ದು
೮. ಒಂದು ವರ್ಣಾಶ್ರಮವನ್ನು ಧರ್ಮವೆಂದರೆ ಇನ್ನೊಂದು ಸಮಾನತೆಯನ್ನು ಧರ್ಮವೆನ್ನುತ್ತದೆ
೯. ಒಂದು ವಿಧಿವಾದವನ್ನು ಮುಂದಿಟ್ಟರೆ ಇನ್ನೊಂದು ಅದನ್ನು ನಿರಾಕರಿಸಿ ಕಾರ್ಯಕಾರಣವನ್ನು ಮುಂದಿಡುತ್ತದೆ.
೧೦. ಒಂದು ದ್ವೈತಾದ್ವೈತಗಳನ್ನು ಮುಂದಿಟ್ಟರೆ ಇನ್ನೊಂದು ಬಯಲನ್ನು, ಶೂನ್ಯತೆಯನ್ನು ಮುಂದಿಡುತ್ತದೆ.

ಕೆಲವು ಉದಾಹರಣೆಗಳನ್ನು ಗಮನಿಸುವುದಾದರೆ:

ಇದೆಯಸಂಖ್ಯಾತ ಕ್ಷಿತೀಶ್ವರ
ರುದಿತ ಕೃತ ಪುಣ್ಯೋಪಚಯ ಭೋ
ಗದಲಿ ಭಾರತವರುಷ ನಿಮ್ಮದು ಪುಣ್ಯಭೂಮಿ ಕಣ
ಇದರೊಳಗೆ ಜಪ ಯಜ್ಞ ದಾನಾ
ಭ್ಯುದಯ ವೈದಿಕ ಕರ್ಮನಿಷ್ಠರ
ಪದವಿಗಳ ಪರುಠಣೆಯನು ಕಲಿಪಾರ್ಥ ನೋಡೆಂದ (ಕುಮಾರವ್ಯಾಸ: ಅ.ಪ.೭–೭೮)

ಅರಸ ಕೇಳೈ ಕ್ಷಾತ್ರ ತೇಜವ
ಹೊರೆವುದೇ ಬ್ರಾಹ್ಮಣ್ಯ ಶಕ್ತಿ
ಸ್ಫುರಣೆ ನೀನೀ ಬ್ರಹ್ಮವರ್ಗದ ಸಾರ ಸೌಖ್ಯದಲಿ
ಮೆರೆದೆಲಾ ವಿಪ್ರಾಪಮಾನವೆ
ಸಿರಿಗೆ ನಂಜು ಕಣಾ ಮಹೀ ಸುರ
ವರರುಪಾಸನೆ ನಿನಗೆ ನೀ ಕೃತಕೃತ್ಯನಹನೆಂದ (ಕುಮಾರ ವ್ಯಾಸ ಅ.ಪ: ೧೩–೬೧)

ಮುಂದುವರೆದು ಸ್ವರ್ಗವನ್ನು ಪಡೆದು ಸುಖವಾಗಿದ್ದವರು(?) ಯಾರ್‍ಯಾರೆಂಬ ಪಟ್ಟಿಯನ್ನು ಕುಮಾರವ್ಯಾಸ ನೀಡುತ್ತಾನೆ:

ಇತ್ತ ನೋಡೈ ಸ್ವಾಮಿ ಕಾರ್ಯಕೆ
ತೆತ್ತನೊಡಲನು ವರ ರಣಾಗ್ರದೊ
ಳಿತ್ತಲೈದನೆ ಭೂಮಿ ಕನ್ಯಾ ಗೋದಾನಾವಳಿಯ
ಇತ್ತವನು ಸತ್ಪುತ್ರವನನು ತಾ
ಹೆತ್ತವನು ಗೋವಿಪ್ರಬಾಧೆಗೆ
ಸತ್ತವನನೆಲೆ ಪಾರ್ಥ ನೋಡುತ್ತಮ ವಿಮಾನದಲಿ (ಕುಮಾರವ್ಯಾಸ ಅ.ಸ.೭–೭೭)

ಇನ್ನು ಜಾತಿವ್ಯವಸ್ಥೆಯ ತಾರತಮ್ಯಗಳೆಲ್ಲವುಗಳಿಗೆ ಸಮ್ಮತಿಯನ್ನು ಉತ್ಪಾದಿಸಿಕೊಳ್ಳಲೆಂದೇ ಇರುವ ಇಂತಹ ಸಾಲುಗಳನ್ನು ಅದೆಷ್ಟು ಸಾರಿ ಅದೆಷ್ಟು ಕಡೆಗಳಲ್ಲಿ ನಾವೆಲ್ಲ ಓದಿ ಬೆಳೆದಿದ್ದೇವೆಯೋ?

ದ್ವಿಜರು ಮುಖದಲಿ ಭೂಪರೀತನ
ಭುಜದಲಾದರು ನಿಖಿಳ ವೈಶ್ಯ
ವ್ರಜ ಘನೋರುಗಳಿಂದ ಶೂದ್ರರು ಪಾದಪದ್ಮದಲಿ
ದ್ವಿಜ ಪತಿಸ್ವಾಂತದಲಿ ವರ ವಾ
ರಿಜ ಸಖನು ಕಣ್ಣಿನಲಿ ವಜ ನಾಂ
ಬುಜದಲಿಂದ್ರಾದಿಗಳು ಜನಿಸಿದರೆಂದನಾ ಭೀಷ್ಮ (ಕುಮಾರ ವ್ಯಾಸ ೯–೨೨ ಸ.ಪ.)

ಯಜ್ಞಧರ್ಮವೇ ಬ್ರಾಹ್ಮಣ ಧರ್ಮ, ಬ್ರಾಹ್ಮಣ ಧರ್ಮವೇ ವರ್ಣಾಶ್ರಮಧರ್ಮ, ವರ್ಣಾಶ್ರಮ ರಕ್ಷಣೆಯಿಂದ ಮಾತ್ರ ಜಗತ್ತು. ವೇದ ಧರ್ಮವನ್ನು ವಿರೋಧಿಸಿದವರಿಗೆ ಸಾವು ಕಟ್ಟಿಟ್ಟದ್ದು, ಬ್ರಾಹ್ಮಣರ ಅಪಮಾನವೇ ಸರ್ವರ ನಾಶಕ್ಕೆ ಕಾರಣ ಎಂದು ಹೆದರಿಸುವ ಧ್ವನಿ ಮಧ್ಯಯುಗದ ಬ್ರಾಹ್ಮಣ ಕವಿಗಳ ಸ್ಥಾಯಿ ದನಿಯಾಗಿದೆ.

ಮಧ್ಯಕಾಲೀನ ಭಾರತದಲ್ಲಿ ಆರಂಭವಾದ ಈ ನಿಲುವನ್ನು ಇಂದಿಗೂ ಗಮಕದ ವಿವಿಧ ಪಲುಕುಗಳಲ್ಲಿ ಸ್ವಾಟೆಯಲ್ಲಿ 'ರಸ' ಒಸರುವಂತೆ ಓದುತ್ತಲೇ ಇದ್ದಾರೆ. ಆದರೆ ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ಮತ್ತು ಇಡಿಯಾಗಿ ಕವಿಯನ್ನೇ ತಿರಸ್ಕರಿಸುವ ಸಾಧ್ಯತೆ ಇರುವುದರಿಂದಾಗಿ ಇಂತಹ ಭಾಗಗಳು ಶಿಕ್ಷಣದ ಪಠ್ಯಗಳಲ್ಲಿ ಸೇರ್ಪಡೆಯಾಗದಂತೆ ಎಚ್ಚರವಹಿಸಲಾಗಿದೆ.

ನಮ್ಮ ಮೌಲ್ಯಗಳನ್ನು ವ್ಯಾಖ್ಯಾನಿಸುವ ಅನೇಕ ವ್ಯಾಖ್ಯಾನಗಳಿವೆ. ವಿಜ್ಞಾನದ ವ್ಯಾಖ್ಯಾನ, ಮೀಮಾಂಸೆಯ ವ್ಯಾಖ್ಯಾನ, ಚರಿತ್ರೆಯ ವ್ಯಾಖ್ಯಾನ, ದರ್ಶನದ ವ್ಯಾಖ್ಯಾನ ಇತ್ಯಾದಿ. ಇನ್ನೊಬ್ಬರ ಬದುಕನ್ನು (ಅನ್ನ, ಭಾಷೆ, ದುಡಿಮೆ, ನಿದ್ರೆ ಮುಂತಾದುವುಗಳನ್ನು) ಮತ್ತೊಬ್ಬರು ಆಕ್ರಮಿಸಿಕೊಳ್ಳಬಾರದು ಎನ್ನುವ ನಿಲುವು ಈ ಎಲ್ಲ ವ್ಯಾಖ್ಯಾನಗಳಿಂದಾಚೆಗೆ ಇರುವ ನೈಸರ್ಗಿಕ ನಿಲುವು. ಲೋಕಕ್ಕೆಲ್ಲ ಒಂದೇ ವ್ಯಾಖ್ಯಾನ ನೀಡಬಯಸುವ ಕಾರ್ಪೋರೇಟ್ ವ್ಯಾಖ್ಯಾನವನ್ನು ನಾವು ಯಾಕೆ ಅನುಮಾನಿಸಬೇಕು? ಅಂತಹ ಒಂದು ವ್ಯಾಖ್ಯಾನ ಎನ್ನುವುದೇ ಸರ್ವಾಧಿಕಾರದ ಮೊದಲ ಮೆಟ್ಟಿಲು. ಅದು ನಿಶ್ಚಿತವಾಗಿ ಸರ್ವಾಧಿಕಾರದಲ್ಲಿ ಕೊನೆಗೊಳ್ಳಲೇಬೇಕು. ಎಲ್ಲವನ್ನೂ ಏಕತ್ರಗೊಳಿಸಬೇಕು. ಒಂದೇ ಮಾರುಕಟ್ಟೆ, ಒಂದೇ ಕರೆನ್ಸಿ, ಒಂದೇ ಭಾಷೆ, ಒಂದೇ ಆಹಾರ ಮುಂತಾದುವುಗಳ ಮೂಲಕ ಜಾರಿಗೆ ಬರುವ ಈ ಅದ್ವೈತೀ ವ್ಯಾಖ್ಯಾನಗಳು ತಮ್ಮನ್ನು ವ್ಯಾಖ್ಯಾನಿಸಿಕೊಳ್ಳುವ ಭಾಷೆಯನ್ನೇ ಕಳೆದುಕೊಂಡು ನುಡಿಯಲಾರದ ಸಂಕಟಕ್ಕೆ ಸಿಕ್ಕಿ ನಲುಗಿರುವ ಸಮೂಹಗಳನ್ನು ಮೊದಲಿಗೆ ದಮನ ಮಾಡುತ್ತವೆ. ನುಡಿಯಿಲ್ಲದ ಅನೇಕ ನೆಲೆಗಳಿವೆ. ಉದಾಹರಣೆಗೆ, ಬುಡಕಟ್ಟುಗಳು, ಮಂಗಳಮುಖಿಯರು, ಸಿರಿಧಾನ್ಯಗಳು, ದೇಶ ಭಾಷೆಗಳು ಇತ್ಯಾದಿ. ಮುಖ್ಯ ಸಂಗತಿಯೆಂದರೆ, ಇವ್ಯಾವೂ ದುರ್ಬಲವಲ್ಲ; ಬದಲಿಗೆ ದುರ್ಬಲಗೊಳಿಸಲಾಗಿದೆ. ಇವುಗಳಿಗೆ ದನಿ ನೀಡಬಲ್ಲ ಸಾಧ್ಯತೆ ಇರುವ ಸಾಹಿತ್ಯವನ್ನು ಕಾರ್ಪೊರೇಟ್ ಸಂಸ್ಕೃತಿ ತಿರಸ್ಕರಿಸುವಂತೆ ಮಾಡುತ್ತದೆ.

ಕಾರ್ಪೊರೇಟ್ ಸಂಸ್ಕೃತಿಗೆ ಒಗ್ಗದ ಸಂಗತಿಗಳೆಂದರೆ ಪ್ರಜಾಪ್ರಭುತ್ವ, ವ್ಯಕ್ತಿ ಭಿನ್ನತೆ, ಚರಿತ್ರೆ, ಜೀವನ ಮೀಮಾಂಸೆ, ನಿಸರ್ಗಸಂರಕ್ಷಣೆ ಇತ್ಯಾದಿ. ಅದರ ಸಾಂಸ್ಕೃತಿಕ ಯಜಮಾನಿಕೆಯನ್ನು ಪ್ರಶ್ನಿಸುವ ಈ ಎಲ್ಲ ಸಂಗತಿಗಳನ್ನೂ ನಿರ್ದಾಕ್ಷಿಣ್ಯವಾಗಿ ಅದು ಹೊಸಕಿ ಹಾಕುತ್ತದೆ. ಅದಕ್ಕೆ ಬೇಕಾದ ಪ್ರಲೋಭನೆಯನ್ನು ಅದು ನಿರಂತರ ಪ್ರಚೋದಿಸುತ್ತದೆ. ಇವುಗಳೆಲ್ಲ ಅದಕ್ಕೆ ತಿರಸ್ಕಾರಯೋಗ್ಯ.

ಹಾಗಾದರೆ ನಮ್ಮ ಸಾಹಿತ್ಯ ಅಂತಾ ಯಾವುದನ್ನು ಕುರಿತು ನಾವು ಮಾತನಾಡುತ್ತಿದ್ದೇವೆಯೋ ಅದೇನು ನಮ್ಮತನವನ್ನು ರಕ್ಷಿಸಿಕೊಡುವ ನಮಗೋಸ್ಕರ ಇರುವ ನಮ್ಮದೆ? ಊಹುಂ ಅದೂ ನಮ್ಮದಲ್ಲ. ಅದೂ ಒಂದು ರೀತಿಯ ವಸಾಹತುಶಾಹಿಯೇ. ನಮ್ಮದಲ್ಲದ ರಾಮಾಯಣ ಮಹಾಭಾರತ ಕಾವ್ಯಗಳು, ನಮ್ಮದಲ್ಲದ ದರ್ಶನಗಳು, ನಮ್ಮದಲ್ಲದ ಕಾವ್ಯ ಮೀಮಾಂಸೆ, ನಮ್ಮವಲ್ಲದ ದೈವಗಳು, ನಮ್ಮದಲ್ಲದ ಆಹಾರವನ್ನು ಮಾನ್ಯಮಾಡುವ, ನಮ್ಮ ಚಹರೆಗಳನ್ನು ಅಪಮಾನಿಸುವ, ಒಟ್ಟಾರೆಯಾಗಿ ನಮ್ಮನ್ನು ನಮ್ಮ ಮನೆಯಿಂದ ಆಚೆನಿಲ್ಲಿಸುವ ಸಾಹಿತ್ಯವನ್ನು ನಮ್ಮದು

ಎಂದುಕೊಂಡಿರುವುದು, ಈ ವ್ಯಾಪಾರೀ ಕಾರ್ಪೊರೇಟ್ ಅಭಿವ್ಯಕ್ತಿಗಿಂತ ಅಪಾಯಕಾರಿಯಾದುದು. ಇದನ್ನು ಕಾರ್ಪೊರೇಟ್ ಮೌಲ್ಯಗಳೊಡನೆ ಮುಖಾಮುಖಿ ಮಾಡಿದರೆ ಏನಾಗುತ್ತದೆ? ಇಂಥದೇ ಇಬ್ಬಂದಿ ಅನೇಕ ಸಲ ಬಂದಿವೆ. ನಗರೀಕರಣವೂ ಇಂಥದೇ ಇಕ್ಕಟ್ಟನ್ನು ಅಥವಾ ಬಯಲನ್ನು ಸೃಷ್ಟಿಸುತ್ತೆ. ಕೆಲವರಿಗೆ ನಗರ ಬಲೇ ಇಕ್ಕಟ್ಟಾದರೆ, ಕೆಲವರಿಗೆ ಬಿಡುಗಡೆ. ಭಾರತಕ್ಕೆಲ್ಲ ಒಂದೇ ಧರ್ಮ ಇದ್ದರೆ ಸಾಕುಬಿಡಿ ಅನ್ನುವಹಾಗೆ. ಇದು ಅತ್ಯಂತ ಜಾರುದಾರಿಯ ನಡೆ. ವಸಾಹತುಶಾಹಿಯಡಿಯಲ್ಲಿ ನಲುಗಿರಿರುವ ನಮ್ಮ ದೇಶ ಅನೇಕ ಸ್ತರಗಳ ವಸಾಹತು. ಹಾಗಾಗಿ ಒಂದು ತೆರವಾದರೆ ಇನ್ನೂ ಕೆಲವು ಹಾಗೇ ಇರುತ್ತವೆ. ಹೊಸ ಹೊಸ ವಸಾಹತುಶಾಹಿ ವರಸೆಗಳು ಸೇರ್ಪಡೆಯಾಗುತ್ತ ಇರುತ್ತವೆ. ಹಾಗಾಗಿ ನಿರಂತರ ವಸಾಹತುವಾಗಿಯೇ ಈ ದೇಶ 'ಮುಂದುವರಿದಿದೆ.'

ಈಗ ನಾವೆಲ್ಲ ಒಂದು ಸಾಂಸ್ಕೃತಿಕ ಉದ್ದಿಮೆಯ ನಟ್ಟ ನಡುವೆ ಇದ್ದೇವೆ. ಸಮೂಹ ಮಾಧ್ಯಮಗಳು ಕೂಡ ಈಗ ಸಾಂಸ್ಕೃತಿಕ ಉದ್ದಿಮೆಯಾಗಿ ಕಾರ್ಯನಿರ್ವಹಿಸುತ್ತಿವೆ. ಅದರ ದೊಡ್ಡಪಾಲನ್ನು ಸಾಂಸ್ಕೃತಿಕ ವಸಾಹತುಶಾಹಿ ಪಡೆದುಕೊಂಡಿದೆ. ಅದು ಉದ್ದಿಮೆ ಏಕೆಂದರೆ ಜ್ಯೋತಿಷ್ಯ, ವಾಸ್ತು ಇತ್ಯಾದಿಗಳ ವಹಿವಾಟು ದಿನವಹಿ ಕೋಟ್ಯಾಂತರ ರೂಪಾಯಿಗಳನ್ನು ಮೀರಿದೆ. ನಮ್ಮ ಸಮೂಹ ಮಾಧ್ಯಮಗಳು ಮುಂದಿಡುತ್ತಿರುವ ಓದಿನ ಮಾದರಿಗಳನ್ನು ನಿರ್ಧರಿಸುತ್ತಿರುವ ಅಧಿಕಾರ ಕೇಂದ್ರಗಳು ನಮ್ಮ ಕಣ್ಣೆದುರಿಗೆ ಇಲ್ಲ; ಬದಲಿಗೆ ಅವುಗಳ ರಿಮೋಟ್ ಮತ್ತೆಲ್ಲಿಯೋ ಇದೆ. ಎದುರಿಗೆ ಇಲ್ಲದ ಇಂತಹ ವೈರಿಯನ್ನು ನಿರ್ವಹಿಸುವುದು ಮತ್ತೂ ಕಷ್ಟ. ಈ ಹೊತ್ತಿನ ಧಾರ್ಮಿಕತೆಯ ವ್ಯಾಖ್ಯಾನ, ರಾಷ್ಟ್ರೀಯತೆಯ ವ್ಯಾಖ್ಯಾನ, ನಾಯಕನ ವ್ಯಾಖ್ಯಾನ ಇವುಗಳನ್ನು ಯಾರು ಎಲ್ಲಿಂದ ನಿರ್ವಹಿಸುತ್ತಿದ್ದಾರೆ ಎಂದು ಕಂಡುಕೊಳ್ಳುವುದು ಸಾಮಾನ್ಯರಿಗೆ ಅಷ್ಟು ಸುಲಭ ಸಂಗತಿಯಲ್ಲ.

**ವ್ಯಾಖ್ಯಾನ ಮತ್ತು ಅಪವ್ಯಾಖ್ಯಾನಗಳು:**

ಕನ್ನಡದ ಸಾಹಿತ್ಯ ಚರಿತ್ರೆಯಲ್ಲಿ ಯಾವ್ಯಾವಾಗ ಬಹುತ್ವ ಮಾತನಾಡಿದೆಯೋ ಆಗೆಲ್ಲ ಕನ್ನಡ ಸಾಹಿತ್ಯಕ್ಕೆ ಮಹತ್ತು ಪ್ರಾಪ್ತವಾಗಿದೆ. ಹೊಸಗನ್ನಡದ ಬಹುಮುಖ್ಯ ಹೊರಳುವಿಕೆಗೆ ಕಾರಣವಾದ ಮೂರು ಮುಖ್ಯ ಸಂಗತಿಗಳನ್ನು ನಾನಿಲ್ಲಿ ಪ್ರಸ್ತಾಪಿಸಬೇಕು. ಅವುಗಳೆಂದರೆ ವಿಜ್ಞಾನ, ಪ್ರಜಾಸತ್ತೆ ಮತ್ತು ಕನ್ನಡದ ಅಸ್ಮಿತೆಯ ಗುಣವಾದ ಬಹುತ್ವ. ಅಕ್ಷರವು ಹರಡಿಕೊಂಡ ಕಾರಣಕ್ಕೆ ಹೊಸ ಓದುಗವಲಯ ಕನ್ನಡದಲ್ಲಿ ಹುಟ್ಟಿಕೊಂಡಿತು. ಪಠ್ಯ ನಿರ್ಮಾಣವನ್ನಷ್ಟೆ ಘನವೆಂಬಂತೆ ಮಾತನಾಡಿಕೊಂಡು ಬಂದಿರುವ ನಾವು ಇನ್ನೂ ಪಠ್ಯದ ಅನುಸಂಧಾನದ ಅಥವಾ ಓದಿನ ಮಾದರಿಯ ಮಹತ್ವವನ್ನು ಅರಿತಂತಿಲ್ಲ. ಕೃತಿಕಾರರಿಂದ ಮಾತ್ರ ಪಠ್ಯ ನಿರ್ಮಾಣವೆಂದು ನಂಬಿರುವ ನಮಗೆ ಓದುಗರು ಕೇವಲ ಓದುಗರು ಮಾತ್ರ. ಆದರೆ ಈ ಓದುಗರೂ ಪಠ್ಯ ನಿರ್ಮಾತೃಗಳೆಂಬ ಸತ್ಯವನ್ನು ಅರಿತಾಗ ಮಾತ್ರ ಅದರ ಇತರ ಆಯಾಮಗಳು ಮುನ್ನೆಲೆಗೆ ಬರುತ್ತವೆ. ಇದೊಂದು ಮೀಮಾಂಸಾ ನಿಲುವಿನ ಪ್ರಶ್ನೆ. ಪಠ್ಯವೆಂದರೆ ಒಂದು ಮೂಲವೆಂದುಕೊಂಡು ಆ ಮೂಲದ ಅನುಸಂಧಾನವನ್ನು ನಡೆಸಬಯಸುವ ಸಂಸ್ಕೃತ ಮೀಮಾಂಸೆಯ

ದೋಷಗಳನ್ನೆಲ್ಲ ನಾವು ಮೈಮೇಲೆ ಎಳೆದುಕೊಂಡಿದ್ದೇವೆ. ಇದನ್ನು ಒಂದು ಆಪಾದನೆಯ ದನಿಯಲ್ಲಿಯೇ ಮುಂದಿಡಬೇಕಿದೆ.

**ಹೆಣ್ಣನ್ನು ಓದಿದ ಬಗೆಗಳು:**

ಸರಿಗರ್ಥ ಇರುವ ಹೆಣ್ಣುಮಕ್ಕಳನ್ನು ಕುರಿತಾದ ಓದುಗಳನ್ನೂ ಗಂಡಸೇ ನಿರ್ಧರಿಸಿದ್ದಾನೆ. ಹಾಗಾಗಿಯೇ ಭಾಷೆ, ದರ್ಶನ, ಮೀಮಾಂಸೆಗಳೆಂಬ ಸಂರಚನೆಗಳೆಲ್ಲ ಹೆಣ್ಣಿನೆದುರಿಗೆ ಬಂದಾಗ ತಬ್ಬಿಬ್ಬಾಗುತ್ತವೆ. ಹೆಣ್ಣನ್ನು ಕಾಣಿಸಿಕೊಡಲು ಹೆಣಗಿದ ಈವರೆಗಿನ ಓದುಗಳು ಅವಳನ್ನು ಕಾಣಲು, ಅಷ್ಟೇನೂ ಉಪಯೋಗಕ್ಕೆ ಬರುವುದಿಲ್ಲ. ಅದರಾಚೆಗಿನ ಅವಳನ್ನು ಇನ್ನೂ ಕಾಣಬೇಕಿದೆ, ಅವಳ ಮಾತನ್ನು ಕೇಳಬೇಕಿದೆ. ವಂಚನೆ, ಚಂಚಲತೆ, ಮೋಸಗಳ ಮೂರ್ತ ಆವೃತ್ತಿಯಂತೆಯೇ ಚಿತ್ರಿತವಾಗಿರುವ ಹೆಣ್ಣಿನ ಒಡನಾಟವೆಂದರೆ ಅದು ಅಪಾಯದ ಹೊರತು ಮತ್ತೇನೂ ಅಲ್ಲ ಎಂದೇ ಬಿಂಬಿಸಲಾಗಿದೆ. 'ಇಂದುಮುಖಿಯರ ಗುಣವ ತಿಳಿಯಲಸಾಧ್ಯ, ನಿತ್ಯದಿ ಹುಸಿಯನಾಡುವರು, ಮನವ ವಂಚಿಸಿ ಮಾತನಾಡುವರು – ಇತ್ಯಾದಿಗಳಲ್ಲಿ ಕಟ್ಟಲಾಗಿರುವ ಹೆಣ್ತನದಲ್ಲಿ ಮಾಯೆ, ವಂಚಕಿಯೆಂಬ ಅಪವಿತ್ರೀಕರಣಗೊಂಡ ಮಹಿಳಾಚರಿತ್ರೆಯೇ ಉದ್ದಕ್ಕೂ ತೆರೆದುಕೊಳ್ಳುತ್ತದೆ.

**ಕಸುಬನ್ನು ಓದಿನ ಮಾಧ್ಯಮವನ್ನಾಗಿಸಿಕೊಳ್ಳುವ ಅಗತ್ಯ:**

ಲೋಕವನ್ನು ವ್ಯಾಖ್ಯಾನಿಸಿ ಕೊಡುವ ಹಕ್ಕು ಸಾಹಿತ್ಯದ ಓದಿಗೆ ಮಾತ್ರವೇ ಅಲ್ಲ, ಅನೇಕ ಕಸುಬುಗಳು ಈ ಕೆಲಸವನ್ನು ಅದಕ್ಕಿಂತ ಚೆನ್ನಾಗಿ ಮಾಡಬಲ್ಲವು. ಎರಡು ಕವನಗಳು ಅದನ್ನು ಹೀಗೆ ವ್ಯಾಖ್ಯಾನಿಸುತ್ತಿವೆ.

ರಸ್ತೆ ಬದಿಯಲ್ಲಿ ಚಮಡ ಹೊಲಿಯುತ್ತ
ಆ ಅನಾದಿ ಮೋಚಿ ಕೂತಿದ್ದ
ಕೂತರೆ ಹಾಗೇ ಕೂರಬೇಕೆನ್ನುವಂತೆ!
ಮೇಲೆ ರವರವ ಬಿಸಿಲು ಬೀಳದಿರಲೆಂದೋ
ಅಥವ ಸೂರ್ಯ ಮೈಲಿಗೆಯಾಗದಿರಲೆಂದೋ
ನಾಕು ದಿಕ್ಕಿಗೂ ಬಿಗಿದೆಳೆದು ಕಟ್ಟಿದ್ದ ಚಿಂದಿ ಅರಿವೆ
. . .
ಯಾವ ಅಜ್ಞಾತ ಕೈಗಳೋ, ಹೀಗೇ ಬಿಗುವಾಗಿ ಕಟ್ಟೀ ಕಟ್ಟೀ

ಒಮ್ಮೆಲೇ ಕಳಚಿಬಿಟ್ಟಂತಿತ್ತು ಆ ಮುಖದ ಸುಕ್ಕುಗಳು
ಆ ಅನಾದಿ ಜೀವದ ಪಕ್ಕವೂ ಕಲ್ಲೊಂದು
ಅನಂತಕಾಲದ್ದೆಂಬಂತೆಯೇ ಬಿದ್ದುಕೊಂಡಿದೆ
ಕೆತ್ತದೆಯೇ ಅನಂತ ಅರ್ಥ ಸಾಧ್ಯತೆಗಳ ಶಿಲ್ಪವಾಗಿಸಬಲ್ಲ
ಕುಶಲಿಗಾಗಿ ಎಂದೆಂದಿನಿಂದಲೋ ಕಾಯುತ್ತಲೇ ಇದೆ! (ಲಕ್ಷ್ಮೀಪತಿ ಕೋಲಾರ)

**ಇನ್ನು ಭಾರತೀಯ ಕಾವ್ಯ ಮೀಮಾಂಸೆಯ ಅಡಿಪಾಯವಾದ ರಸಮೀಮಾಂಸೆಯ ಓದು.**

**ನಮ್ಮ ಮನೆಯ ಮಡಕೆಯಲ್ಲಿ ಕುದಿಯುತ್ತಿರುವ ಕಾವ್ಯ :**

ನಮ್ಮ ಮನೆಯ
ದನದ ಬಾಡಿನಲ್ಲಿ
ಮೂವತ್ತು ಮೂರು ಕೋಟಿ ದೇವತೆಗಳು
ಬೇಯುತ್ತಿವೆ!
ಬ್ರಹ್ಮ, ವಿಷ್ಣು, ಮಹೇಶ್ವರ
ಇನ್ನೂ ಯಾವ ಯಾವುದೋ
ಹೆಸರು ತಿಳಿಯದ
ಮೂವತ್ತು ಮೂರು ಕೋಟಿ ದೇವತೆಗಳು
ಬೇಯುತ್ತಿವೆ! ...
ಇನ್ನೊಂದು ದೇವರ ಹೆಣ ಬೀಳಲಿ
ಎಂದು ಮೂವತ್ತು ಮೂರು ಕೋಟಿ
ಮಂದಿ ಅಲ್ಲೇ ಕುಂತವರೆ
ಉಪ್ಪು ಕಾರವ ಮಡಗಿಕೊಂಡು
ಒಲೆಯ ಮೇಲಿನ ಬಾಡಿಗೆ
ಬಾಯಿ ಬಿಟ್ಟುಕೊಂಡು! (ದೇವ ಬಾಡಿನ ಗಮಲು – ಕೆ ಯಲ್ಲಪ್ಪ)

ಭಾಷೆಗೇ ಬೇಜಾರಾಗುವಷ್ಟು ಬಾರಿ ಇದನ್ನೆಲ್ಲ ಹೇಳಿಯಾಗಿರಬಹುದು. ರಸನಿಷ್ಪತ್ತಿಯೇ 'ಭಾರತೀಯ ಕಾವ್ಯ ಮೀಮಾಂಸೆಯ' ಪ್ರಧಾನ ಭೂಮಿಕೆ. ಇದನ್ನೊಂದು ಪ್ರಮಾಣದ ಹಾಗೆ ಪಾಲಿಸಲಾಗಿದೆ. ರಸದ ಉದ್ಯೋಗ ಇಲ್ಲೂ ನಡೆದಿದೆ. ಇಲ್ಲೂ ರಸ ತಯಾರಾಗುತ್ತಿದೆ. ಆದರೆ ರಸೋದ್ಯೋಗದ ಉದ್ದೇಶಗಳು ಮಾತ್ರ ಬೇರೆ ಬೇರೆಯೇ ಆಗಿವೆ. ಒಂದು ರಸವನ್ನು ಪರಬ್ರಹ್ಮಕ್ಕೆ ಅರ್ಪಿಸಲು ಹೊರಟರೆ ಇನ್ನೊಂದು ಅದೇ ರಸದಿಂದ ಮುನ್ನೂರು ಮೂವತ್ತು ಕೋಟಿ ಜೀವಗಳ ಹಸಿವು ತೀರಿಸಲು ಹೊರಟಿದೆ. ಒಂದು ಇನ್ನೊಂದಕ್ಕೆ ಪ್ರತಿಯಲ್ಲ. ಆಗಬೇಕಾದ್ದೂ ಇಲ್ಲ. ಈ ದಾರಿಗಳೆರಡನ್ನೂ ನಿರ್ವಹಿಸಿರುವ ಮಹಾನ್ ಕವಿಗಳ, ದಾರ್ಶನಿಕರ, ಮೀಮಾಂಸಕರ ದೊಡ್ಡ ಪಟ್ಟಿ ಎರಡೂ ಪ್ರಸ್ಥಾನಗಳಲ್ಲಿ ಇವೆ. ಯಾವುದು ಅಧಿಕಾರ ಕೇಂದ್ರಗಳೊಡನೆ ಸಖ್ಯ ಸಂಪಾದಿಸುವುದೋ ಅದಕ್ಕೆ ಅಗ್ರಪಟ್ಟ ಸಿಕ್ಕಿರುವುದು ಚರಿತ್ರೆಯಲ್ಲಿ ಕಂಡುಬರುವ ಮುಖ್ಯ ಸಂಗತಿ. ಇದರ ಝಳಕುಗಳನ್ನು ವರ್ತಮಾನದ ರಾಜಕಾರಣದಲ್ಲೂ ಕಾಣಬಹುದು.

ಕನ್ನಡಕ್ಕೆ ಬೇಕು ಕನ್ನಡದ್ದೇ ಆದ ವ್ಯಾಕರಣ/ಮೀಮಾಂಸೆ ಎನ್ನುವ ನಿಲುವು ಅನೇಕ ಸಂಗತಿಗಳನ್ನು ಮುನ್ನೆಲೆಗೆ ತಂದು ನಿಲ್ಲಿಸಿತು. ಮೊದಲನೆಯದಾಗಿ ಕನ್ನಡವಾಗಲೀ, ಇತರ ದೇಶಭಾಸೆಗಳಾಗಲೀ ಸಂಸ್ಕೃತಕ್ಕೆ ಪರಿಶಿಷ್ಟಗಳಾಗಬೇಕಿಲ್ಲ. ಭಾರತವನ್ನು 'ಓದಲು' ಸಂಸ್ಕೃತ, ತಮಿಳು, ಇಂಗ್ಲಿಷ್, ಹಿಂದಿಗಳಷ್ಟೇ ಅಲ್ಲ; ಕನ್ನಡವೂ ಮಾಧ್ಯಮವಾಗಬಲ್ಲದು. ಕನ್ನಡವನ್ನು ಕೇವಲ ಪಡೆಯುವ ಭಾಷೆಯಾಗಿ ನೋಡಲಾಗಿದೆಯೇ ಹೊರತು ನೀಡಬಲ್ಲ ಭಾಷೆಯನ್ನಾಗಿ ನೋಡಿಲ್ಲ. ಭಾರತೀಯ ಬದುಕನ್ನು 'ಉತ್ತರ ಭಾರತ ಕೇಂದ್ರಿತ' ಮಾದರಿಗಳ ಮೂಲಕ ನೋಡುವ ಕ್ರಮವನ್ನು ನಿರಾಕರಿಸಿ ಕನ್ನಡದ ಅಸ್ಮಿತೆಯನ್ನು ಕಂಡುಕೊಳ್ಳುವ ಗಂಭೀರ ಪ್ರಯತ್ನಗಳೆಂದು ಕೆಲವನ್ನು ಗುರುತಿಸಬಹುದು. ಕೆ.ವಿ. ನಾರಾಯಣ ಅವರು ಬೇರು ಕಾಂಡ ಚಿಗರು, ಕನ್ನಡ ಜಗತ್ತು – ಅರ್ಧ ಶತಮಾನ, ರಹಮತ್ ತರೀಕೆರೆ ಅವರ 'ಇಲ್ಲಿ ಯಾರೂ ಮುಖ್ಯರಲ್ಲ', ಸೂಫಿ, ನಾಥಪಂಥದ ಬಗೆಗಿನ ಕೃತಿಗಳು, ಷ. ಶೆಟ್ಟರ್ ಅವರು ಶಂಗಂ ತಮಿಳಗಂ, ಇದೇ ಲೇಖಕನ ಕನ್ನಡ ಕಾವ್ಯ ಮೀಮಾಂಸೆ, ನಾಗಾರ್ಜುನ–ಅಲ್ಲಮ, ಮುಂತಾದ ಕೃತಿಗಳನ್ನು ಹೆಸರಿಸಬಹುದು. ಶೆಟ್ಟರ್ ಮತ್ತು ಮನು ವಿ. ದೇವದೇವನ್ – ಈ ಇಬ್ಬರೂ ಉತ್ತರ ಭಾರತ ಕೇಂದ್ರಿತ ಇತಿಹಾಸ ಮತ್ತು ಸಂಸ್ಕೃತಿ ರಚನೆಯ ಮಾದರಿಯನ್ನು ಪ್ರಶ್ನಿಸುತ್ತಿರುವವರು. ದಕ್ಷಿಣಭಾರತದ ಚರಿತ್ರೆ, ಮೀಮಾಂಸೆಗಳು ಸಂಸ್ಕೃತದ, ಉತ್ತರ ಭಾರತದ ಅನುಬಂಧವಾಗುತ್ತಿರುವ ಹಿನ್ನೆಲೆಯಲ್ಲಿ ಅಂತಹ ಮಾದರಿಗಳನ್ನು ನಿರಾಕರಿಸುವ ದೃಷ್ಟಿಯಿಂದ ಈ ಭಿನ್ನ ಓದುಗಳು ಹೆಚ್ಚು ಪ್ರಸ್ತುತ.

ಇಡಿಯಾಗಿ ಭಾರತದ ಬದುಕು ತನ್ನನ್ನೇ ಸೀಳಿಕೊಂಡಿದೆ. ನಮ್ಮದು ನಾವೇ ಸೀಳಿಕೊಂಡ ಬದುಕು. ಸ್ಕಿಜೋಫ್ರೇನಿಕ್ ಅವಸ್ಥೆ ಕೇವಲ ಮನಸ್ಸಿಗೆ ಸಂಬಂಧಿಸಿದುದಲ್ಲ; ಬದಲಿಗೆ ಭಾರತೀಯ ಬದುಕಿಗೇ ಸಂಬಂಧಿಸಿದುದು. ವೈದಿಕ ಧಾರೆಗೆ ಭಾರತೀಯ ಬದುಕು ಹೇಗೇ ಕಾಣಿಸಲಿ, ನಮ್ಮ ನಡುವಿನ ತರತಮಗಳಂತೂ ನಿತ್ಯ ಬದುಕಿನ

ವಾಸ್ತವವಾಗಿರುವುದರಿಂದ, ಇಂತಹ ವಿಭಜನೆ ಅನಿವಾರ್ಯ. ನಮ್ಮದೇ ಆದ ಓದನ್ನು ನಾವೀಗಲಾದರೂ ಕಂಡುಕೊಳ್ಳಬೇಕಾದ ಸನ್ನಿವೇಶದಲ್ಲಿ ನಾವೀಗ ಇದ್ದೇವೆ. ನಮ್ಮ ಸಂಶೋಧಕರು ಅದನ್ನು ಆಗಮಾಡಬೇಕಿದೆ.

––

**ಪರಾಮರ್ಶನ ಗ್ರಂಥಗಳು**

೧. ರಹಮತ್ ತರೀಕೆರೆ., ಕನ್ನಡ ಸಂಶೋಧನೆ: ತಾತ್ವಿಕ ವಿಚಾರ., ೨೦೧೮., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಎಂ. ಚಂದ್ರ ಪೂಜಾರಿ., ಸಂಶೋಧನೆ ಏನು? ಏಕೆ? ಹೇಗೆ? ೨೦೧೮., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಡಿ. ಎನ್ ಶಂಕರ್ ಭಟ್., ಕನ್ನಡ ವಾಕ್ಯಗಳ ಒಳರಚನೆ ಮತ್ತು ಅರ್ಥವ್ಯವಸ್ಥೆ., ೧೯೭೮., ೨೦೧೯., ಭಾಷಾ ಪ್ರಕಾಶನ, ಸಾಗರ.

೪. ಡಿ. ಎನ್ ಶಂಕರ್ ಭಟ್., ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ., ೨೦೦೬., ಭಾಷಾ ಪ್ರಕಾಶನ, ಸಾಗರ.

೫. ಕೆ.ವಿ. ನಾರಾಯಣ., ಶೈಲಿಶಾಸ್ತ್ರ., ೧೯೯೦., ಕರ್ನಾಟಕ ಸಾಹಿತ್ಯ ಅಕಾಡೆಮಿ., ಬೆಂಗಳೂರು.